ಲಂಬವಾಗಿದ್ದ ರಿಂಗ್‌ರೋಡ್‌ನಲ್ಲಿಯೂ ಸಾಲುಗಟ್ಟಲೆ ವಾಹನಗಳು ನಿಂತಿದ್ದುವು. ಬೃಹದಾಕಾರದ ರಾತ್ರಿ ಬಸ್ಸುಗಳು, ವೋಲ್ವೋ ಬಸ್ಸುಗಳು, ಕಾರುಗಳು, ಆಟೋಗಳು, ಇವುಗಳ ನಡುವೆ ಫುಟ್‌ಪಾತ್ ಹತ್ತಿ ಸಿಕ್ಕಿದ ಸಂದಿಗೊಂದಿಗಳಲ್ಲಿ ಸ್ಥಳ ಮಾಡಿಕೊಂಡು ಮುಂದುವರಿಯುವ ಬೈಕ್ ಸವಾರರು.

ಮುಂದೆ ಹೋದಂತೆ ರಸ್ತೆಯಲ್ಲಿ ಸೇರಿದ ಜನಜಂಗುಳಿ ಕಂಡು ಅವಳ ಆತಂಕ ಹೆಚ್ಚಾಯಿತು. ವಾಚ್ ನೋಡಿದಳು. ಏಳೂವರೆಗೆ ಇನ್ನೂ ಹತ್ತು ನಿಮಿಷಗಳಿದ್ದುವು. 'ಡೇ ಕೇರ್'ನ ಮೇಮ್ ಇಂದು ಖಂಡಿತ ರೇಗುತ್ತಾಳೆ. ಆ ಯೋಚನೆಯಿಂದ ಅವಳ ಮನಸ್ಸು ಇನ್ನೂ ತ್ರಸ್ತಗೊಂಡಿತು.

ಜನರ ಮಧ್ಯೆ ದಾರಿ ಮಾಡಿಕೊಂಡು ರಸ್ತೆಯ ಆಚೆ ಬದಿಗೆ ಹೋಗುವುದು ಅವಳಿಂದ ಬಹಳ ಹೊತ್ತು ಸಾಧ್ಯವಾಗಲೇ ಇಲ್ಲ. ನೆಲ ನೋಡಲೆ, ದಾರಿ ಮಾಡಿಕೊಳ್ಳಲೆ ಎಂಬ ಸಂದಿಗ್ಧದಲ್ಲಿ ಇರುವಾಗಲೇ ಅವಳು ತಲೆ ಎತ್ತಿದಾಗ ರಸ್ತೆಯ ಮಧ್ಯೆ ಎರಡು ಮೂರು ಅಗ್ನಿಶಾಮಕ ವಾಹನಗಳು, ಒಂದು ಜೆಸಿಬಿ ಯಂತ್ರ ಹಾಗೂ ಒಂದು ಆಂಬುಲೆನ್ಸ್ ನಿಂತಿರುವುದು ಕಂಡು ದಿಗಿಲುಪಟ್ಟಳು. ಟ್ರಾಫಿಕ್ ಜಾಮ್‌ಗೆ ಅದೇ ಕಾರಣವಾಗಿದ್ದುದು ಅವಳಿಗೆ ಅರಿವಾಯಿತು. ಪಕ್ಕದಲ್ಲಿದ್ದ ಯಾರೋ ಒಬ್ಬರು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಅವಳ ಕಿವಿಯ ಮೇಲೆ ಬಿತ್ತು.

'ಏನಾಗಿದೆ?'

ಇನ್ಯಾರೋ ಉತ್ತರಿಸಿದರು: 'ಗೋಡೆ ಕುಸಿದು ಇಬ್ಬರು ಮಣ್ಣಿನೊಳಗೆ ಸಿಕ್ಕಿ ಬಿದ್ದಿದ್ದಾರೆ. ಒಬ್ಬರನ್ನು ಈಗ ಮೇಲಕ್ಕೆ ಎತ್ತಿದರು. ಇನ್ನೊಬ್ಬ ಇನ್ನೂ ಮಣ್ಣಿನಡಿಯಲ್ಲೇ ಇದ್ದಾನೆ. ತಲೆ ಮಾತ್ರ ಕಾಣುತ್ತಿದೆ.'

ಅವಳಿಗೆ ತೀರ ಗಾಬರಿಯಾಯಿತು.

'ಅದಕ್ಕೇ ಈ ಟ್ರಾಫಿಕ್ ಜಾಮ್ ಆಗಿದೆ!'

'ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಆಗೋದಕ್ಕೆ ಕಾರಣ ಬೇಕಾ?'

ಅದನ್ನು ಬೇರೆ ಹೇಳಬೇಕಾಗಿರಲಿಲ್ಲ. ಜೆಸಿಬಿ ಮಣ್ಣನ್ನು ಎತ್ತಿ ಎತ್ತಿ ಹಾಕಲು ಉರುಳುತ್ತಿತ್ತು. ಡ್ಯೂಟಿ ಮೇಲಿದ್ದ ಪೊಲೀಸ ಜವಾನನೊಬ್ಬ ಜನರನ್ನು ದೂರ ಸರಿಸಲು ಹರಸಾಹಸ ಪಡುತ್ತಿದ್ದ.

'ಎಂಥ ಕುತೂಹಲವಪ್ಪ ಈ ಜನರದ್ದು! ಕೆಳಗೆ ಬಿದ್ದವನನ್ನು ನೋಡಲು ಇಷ್ಟೊಂದು ಜನರು ಮುಗಿಬೀಳುವುದೇ? ಥೂ, ಹೋಗ್ರಪ್ಪ. ಏಯ್, ಹೋಗೋ ಆಚೆ.'

ಹೇಗೋ ಅವಳು ರಸ್ತೆಯ ಇನ್ನೊಂದು ಬದಿಗೆ ಬಂದು ಮುಟ್ಟಿದ್ದಳು. ಅವಳಿಗೆ ಮಣ್ಣಿನಡಿಯಲ್ಲಿ ಸಿಕ್ಕಿಬಿದ್ದವನ ಮುಖ ನೋಡುವ ಆಸ್ಥೆಯಿರಲಿಲ್ಲ. ಅವಳ ಆತಂಕ ಒಂದೇ— ಏಳೂವರೆಯ ಮೊದಲು 'ಡೇ ಕೇರ್' ಮುಟ್ಟಬೇಕು, ಮಗುವನ್ನು ಕರೆದುಕೊಂಡು ಅಲ್ಲಿಂದ ಹೊರಬೀಳುವವರೆಗೆ ಸಿಂಡರಿಸಿಕೊಂಡ ಮೇಮ್‌ನ ಆಕ್ಷೇಪಣೆಯ ಸಿಟ್ಟಿನ ಮಾತುಗಳನ್ನು ಮಾತುಗಳನ್ನೆದುರಿಸಬೇಕಾಗಿದೆ. ಮಳೆ ಹನಿಗಳು ದಪ್ಪನಾಗತೊಡಗಿವೆ. ಬೆಳಗ್ಗೆ ಹೊರಡುವಾಗ ಚೆನ್ನಾಗಿ ಬಿಸಿಲು ಬಿದ್ದಿತ್ತು. ಆಕಾಶ ಶುಭ್ರವಾಗಿತ್ತು. ಸಂಜೆ ಮಳೆ ಬರಬಹುದು ಎಂಬ ಯಾವ ಸೂಚನೆಯೂ ಇರಲಿಲ್ಲ. ಇಲ್ಲದಿದ್ದರೆ ಕೊಡೆಯನ್ನಾದರೂ ಹಿಡಿದುಕೊಳ್ಳಬಹುದಿತ್ತು. ಅದನ್ನು ಮರೆತು ಬಂದುದು ತನ್ನ ಮೂರ್ಖತನ ಅಥವಾ ದುರದೃಷ್ಟವೇ?

ದೆವ್ವನಂಥ ಬಸ್‌ಗಳ, ಒಬ್ಬೊಬ್ಬರೆ ಕೂತ ದೊಡ್ಡ ದೊಡ್ಡ ಕಾರುಗಳ ನಡುವೆ ಹಾದಿ ಮಾಡಿಕೊಂಡು ರಿಂಗ್ ರೋಡ್ ದಾಟಿ, ಏಳನೆಯ ಬ್ಲಾಕಿನ ರಸ್ತೆಗೆ ಅವಳು ಬಂದಾಗ ಗಂಟೆ